ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಹೇಳಿರುವ ಅಂಕಿಗಅಂಶಗಳ ಪ್ರಕಾರ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ. ಆದರೆ ಆಗಿರುವ ಖರ್ಚು ಅದಕ್ಕೆ ಅನುಗುಣವಾಗಿಲ್ಲ ಅದು ಕಡಿಮೆಯಾಗುತ್ತಿದೆ. ಅದಕ್ಕೆ ಏನು ಕಾರಣ ? ಅವರ ಸಂಖ್ಯೆಯ ಆಧಾರದ ಮೇಲೆ ಹಣ ಖರ್ಚಾಗುವಂತೆ ನೋಡಿಕೊಳ್ಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ನಾನು ಹೇಳಿದಹಾಗೆ ಆಯಾಯ ಜಿಲ್ಲೆಗಳಲ್ಲಿ ಮಾಡುವ ಖರ್ಚಿನ ಮೇಲೆ ಇದು ಹೋಗಿರುತ್ತದೆ. ಎರಡನೇಯದು ನಮ್ಮ ಆರ್ಥಿಕ ಮುಗ್ಗಟ್ಟಿನಿಂದ ಪ್ರಾರಂಭದಲ್ಲಿ ಖರ್ಚು ಸ್ವಲ್ಪ ಕಡಿಮೆಯಾಗಿದ್ದು ಅದು ಬರುತ್ತಾ ಬರುತ್ತಾ ಕಡಿಮೆಯಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಒಂದೊಂದು ಕಡೆ.....

ಅಧ್ಯಕ್ಷರು.—ತಾವು ಕೂಡ್ರಿ...

ಶ್ರೀ ಎ. ಎಂ. ಹಿಂಡಸಗೇರಿ.—ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ ಏನೆಂದರೆ ಪ್ರತಿ ವರ್ಷ ಮಕ್ಕಳು ಜಾಸ್ತಿ ಯಾಗುತ್ತಿದ್ದಾರೆ ಎಂದು. ಆದರೆ ಈ ಯೋಜನೆಯಿಂದೇನೂ ಮಕ್ಕಳು ಜಾಸ್ತಿ ಯಾಗುವುದಿಲ್ಲ. ನಮ್ಮ ಜನಸಂಖ್ಯೆಯಿಂದಾಗಿ ಮಕ್ಕಳು ಜಾಸ್ತಿ ಬರುತ್ತಿದ್ದಾರೆ. ಈ ಮಕ್ಕಳು ಜಾಸ್ತಿ ಇದ್ದರೂ ಸಹಿತ ಖರ್ಚು ಕಡಿಮೆ ಮಾಡಿದ್ದಾರೆ. ಕೋಟಿಗಟ್ಟಲೆ ಖರ್ಚು ಕಡಿಮೆ ಮಾಡಿದ್ದಾರೆ. ಪ್ರತಿವರ್ಷ ನೋಡಿದರೆ ಮೂರು ಕೋಟಿಗಿಂತ ಕಡಿಮೆ ಖರ್ಚು ಮಾಡಿದ್ದಾರೆ. ನನ್ನ ಎರಡನೇ ಪ್ರಶ್ನೆ ಏನೆಂದರೆ, ಈ ಸಮವಸ್ತ್ರಗಳನ್ನು ಯಾವ್ಯಾವ ಮೂಲದಿಂದ ಅಂದರೆ ನಮ್ಮ ರಾಜ್ಯದಿಂದ ಅಥವಾ ಬೇರೆ ರಾಜ್ಯದಿಂದ ಖರೀದಿ ಮಾಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.— ಈಗ ಮಾಹಿತಿ ಇಲ್ಲ. ಬೇಕಾದರೆ ಒಪಗಿಸಿ ಕೊಡುತ್ತೇನೆ.

ಸರ್ಕಾರದ ವತಿಯಿಂದ ಪುಸ್ತಕಗಳ ಸಗಟಂ ಖರೀದಿ ಯೋಜನೆ

೯೪೨ (೩೦೧೧) ಶ್ರೀ ಎಸ್. ಮುನಿಶಾಮಪ್ಪ (ಶಿಡ್ಲಘಟ್ಟ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಪುಸ್ತಕಗಳ ಸಗಟು ಖರೀದಿ ಯೋಜನೆಯನ್ನು ಸರ್ಕಾರದ ವತಿಯಿಂದ ಯಾವ ಸಾಲಿನಿಂದ ಪ್ರಾರಂಭಿಸಲಾಯಿತು, ಇದುವರೆಗೆ ಖರೀದಿಸಿರುವ ಪುಸ್ತಕಗಳ ಸಂಖ್ಯೆ ಮತ್ತು ಅವುಗಳ ಮಾಲ್ಯವೆಷ್ಟು? (ವಿವರಗಳನ್ನು ಲಗತ್ತಿಸುವುದು)

ಆ) ಈ ಯೋಜನೆಯಡಿಯಲ್ಲಿ ಖರೀದಿಸಲಾಗುವ ಪುಸ್ತಕಗಳ ಆಯ್ಕೆಯನ್ನು ಮಾಡುವಲ್ಲಿ ಅನುಸರಿಸುತ್ತಿರುವ ನಿಯಮಗಳು ಯಾವುವು ?

ಇ) ಸರ್ಕಾರಿ ನೌಕರರಾಗಿದ್ದು ಲೇಖಕರಾಗಿರುವವರ ಪ್ರಕಟಿತ ಪುಸ್ತಕಗಳನ್ನು ಆಯ್ಕೆ ಮಾಡಲು ಏನಾದರೂ ಪ್ರಾಶಸ್ತ್ಯ ನೀಡಲಾಗುತ್ತಿದೆಯೇ ? ಇಲ್ಲವಾದಲ್ಲಿ ಅವರಿಗೆ ಪ್ರೋತ್ಸಾಹ ನೀಡುವ ಯೋಜನೆಗಳು ಸರ್ಕಾರದ ಮುಂದಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಶಿಕ್ಷಣ ಇಲಾಖೆಯಲ್ಲಿ ಈ ಯೋಜನೆ ಯಡಿಯಲ್ಲಿ ಎರಡು ಸಗಟು ಖರೀದಿ ಸಮಿತಿಗಳಿವೆ.

೧) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪ್ರಾರಂಭ—೧೯೬೯-೭೦

೨) ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ—೧೯೮೩-೮೪ ರಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಖರೀದಿಸಿರುವ ಪುಸ್ತಕಗಳ ಸಂಖ್ಯೆ: ೧,೫೦,೫೪,೨೭೩ ಮೌಲ್ಯ ರೂ. ೨,೫೦,೯೭ ಳಳ೦-೬೩

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಖರೀದಿಸಿರುವ ಪುಸ್ತಕಗಳ ಸಂಖ್ಯೆ: ೨,೧೩,೮೩೦ ಮೌಲ್ಯ ರೂ. ೨೩,೯೯,೧೪೮-೦೦

ಆ) ತಜ್ಞರಿಂದ ಮತ್ತು ಸದಸ್ಯರು ಸ್ವತಃ ಪರಾಮರ್ಶಿಸಿದ ನಂತರ, ಆಯ್ಕೆ ಸಮಿತಿಯು ಶಿಫಾರಸ್ಸು ಮಾಡಿದ ಪುಸ್ತಕಗಳನ್ನು ಪರಿಶೀಲಿಸಿ ಒದಗಿಸಿರುವ ಹಣ ಚೌಕಟ್ಟಿನಲ್ಲಿ ಖರೀದಿಸುವುದು.

ಇ) ಇಲ್ಲ.

೧೨.೦೦ noon

ಶ್ರೀ ಎಸ್. ಮುನಿಶಾಮಪ್ಪ.—ಮಾನ್ಯ ಅಧ್ಯಕ್ಷರೇ, ಈ ಯೋಜನೆಯಡಿಯಲ್ಲಿ ಎರಡು ಸಗಟು ಖರೀದಿ ಸಮಿಗಳು ಶಿಕ್ಷಣ ಇಲಾಖೆಯಲ್ಲಿ, ಇವೆಯೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಈ ಸಮಿತಿಗಳಲ್ಲಿ ಯಾರು ಯಾರು ಇದ್ದಾರೆ ಎಂಬುದು ಗೊತ್ತಾಗಬೇಕು. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಈ ಯೋಜನೆ ೧೯೬೯–೭೦ ರಿಂದ ಮತ್ತು ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ೧೯೮೭–೮೮ ರಿಂದ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ. ಈ ಸಗಟು ಖರೀದಿ ಯೋಜನೆಗಾಗಿ ಬಜೆಟ್‌ನಲ್ಲಿ ೫೦ ಲಕ್ಷ ರೂಪಾಯಿಗಳನ್ನು ಮೀಸಲಿಟ್ಟು ಹಣದಲ್ಲಿ ಕೇವಲ ೨೩ ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿದೆ. ಬಾಕಿ ಇರತಕ್ಕ ಹಣವನ್ನು ಖರ್ಚು ಮಾಡದೇ ಇರುವುದಕ್ಕೆ ಕಾರಣ ಏನು ? ತಜ್ಞರ ಸಮಿತಿಯಲ್ಲಿ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಅನೇಕ ಬರಹಗಾರರ ಪುಸ್ತಕಗಳನ್ನು ಕಡೆಗಣಿಸಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಸರ್ಕಾರಿ ನೌಕರರು ಲೇಖಕರಾಗಿದ್ದರೆ, ಅವರ ಪುಸ್ತಕಗಳನ್ನು ಖರೀದಿಸುವುದರಿಂದ, ಅವರಿಗೆ ಪ್ರಾಶಸ್ತ್ಯ ಹಾಗೂ ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲವೇ ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಬರಹಗಾರರನ್ನು ಪ್ರೋತ್ಸಾಹಿಸಲು ಸರ್ಕಾರದವರು ವಿಶೇಷ ಯೋಜನೆಯನ್ನು ಏನಾದರು ರೂಪಿಸಿದ್ದಾರೆಯೇ ? ಒಂದು ವೇಳೆ ರೂಪಿಸದೇ ಹೋದರೆ, ಮಾನ್ಯಮಂತ್ರಿಗಳು ತಕ್ಷಣ ಈ ಯೋಜನೆಯನ್ನು ರೂಪಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಮೊದಲನೇ ಸಮಿತಿಯಲ್ಲಿ ಕಮೀಷನರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ರವರು, ಡೈರಕ್ಟರ್, ಕನ್ನಡ ಅಂಡ್ ಕಲ್ಚರ್ ಅವರು ಹಾಗೂ ಡೈರಕ್ಟರ್ ಆಫ್ ಲೈಬ್ರರೀಸ್‌ರವರು ಈ ಮೂರು ಮಂದಿ ಜೊತೆಗೆ ಅಧಿಕಾರೇತರ ಸದಸ್ಯರಾದ ಶಾಸಕರೂ ಇದ್ದಾರೆ. ಶ್ರೀ ಕರಂಬಳ್ಳಿ ಸಂಜೀವಶೆಟ್ಟಿ, ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ, ಡಾ॥ ಕಾಲಕೋಟಿ, ಶ್ರೀ ಭೀಮನೇನಿ ಕೊಂಡಯ್ಯ, ಶ್ರೀ ಎಂ. ವಿಶ್ವನಾಥ್ ಮತ್ತು ಶ್ರೀ ರೋಷನ್‌ಬೇಗ್ ಅವರು ಇದ್ದಾರೆ. ಇದೇರೀತಿ ಗ್ರಂಥಾಲಯ ಇಲಾಖೆಯಲ್ಲಿ, ಗ್ರಂಥಾಲಯ ನಿರ್ದೇಶಕರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಇವರ ಜೊತೆಗೆ ೧೪ ಮಂದಿ ಸದಸ್ಯರೂ ಇದ್ದಾರೆ. ಇವರುಗಳಲ್ಲಿ ಅನೇಕ ಪರಿಣತರು, ಸಾಹಿತಿಗಳೂ ಇದ್ದಾರೆ. ಒಟ್ಟು ೧೪ ಮಂದಿ ಸದಸ್ಯರು ಈ ಸಮಿತಿಯಲ್ಲಿದ್ದಾರೆ. ಈ ಎರಡು ಸಮಿತಿಗಳೂ ಸಭೆ ಸೇರಿ, ಪುಸ್ತಕಗಳಿಗಾಗಿ ಬಂದ ಅರ್ಜಿಗಳನ್ನು ಪರಿಶೀಲಿಸಿ ಅರ್ಹತೆಗಳಿಗನುಸಾರವಾಗಿ ಆಯ್ಕೆ ಪಟ್ಟಿ ತಯಾರು ಮಾಡಿ, ತದನಂತರ ಕೊಂಡುಕೊಳ್ಳುವುದಕ್ಕೆ ಸರ್ಕಾರಕ್ಕೆ ಶಿಫಾರಸ್ ಮಾಡುತ್ತಾರೆ.

ಶ್ರೀ ಎಸ್. ಮುನಿಶಾಮಪ್ಪ.—ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಬರಹಗಾರರಿಗೆ ಪ್ರೋತ್ಸಾಹ ಕೊಡುವ ಸಲುವಾಗಿ ಸರ್ಕಾರದವರು ವಿಶೇಷ ಯೋಜನೆಯನ್ನು ರೂಪಿಸಿದ್ದಾರೆಯೇ ಎಂಬ ಬಗ್ಗೆ ಮಾನ್ಯಮಂತ್ರಿಗಳಿಂದ ಉತ್ತರ ಬೇಕಾಗಿದೆ.

ಶ್ರೀ ಎಂ. ಚಂದ್ರಶೇಖರ್.—ಇವರಿಗೆ ಪ್ರತ್ಯೇಕವಾದ ನಿರ್ದೇಶನ ಇದ್ದಹಾಗೆ ಇಲ್ಲ, ಇದರ ಬಗ್ಗೆ ನೋಡುತ್ತೇನೆ. ಒಟ್ಟಾರೆ ಎಲ್ಲಾ ಸಾಹಿತಿಗಳಿಂದ, ಬರಹಗಾರರಿಂದ ಅರ್ಜಿಗಳನ್ನು ಕರೆದು, ಬಂದ ಅರ್ಜಿಗಳನ್ನು ನೋಡುತ್ತಾರೆ. ಪ್ರತ್ಯೇಕವಾಗಿ ಹಿಂದುಳಿದ ವರ್ಗದವರಿಗೆ ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದ ಲೇಖಕರಿಗೆ ಏನಾದರೂ ಬೇರೆ ಒಂದು ರೀತಿಯ ಪ್ರೋತ್ಸಾಹ ಕೊಡುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಕ್ತಾಯವಾಯಿತು. ಆದರೂ ಸಹ, ಇಂದಿನ ಪ್ರಶ್ನೆ ಪಟ್ಟಿಯಲ್ಲಿ ಇರತಕ್ಕ ಸದಸ್ಯರು ಹಾಜರಿದ್ದರೆ, ಅವರಿಗೆ ಒಂದೇ ಒಂದು ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ.

ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿ ಕಾವುಗಾರಿ ಕುರಿತಂ

೯೪೩ (೩೦೮೦) ಶ್ರೀ ಡಿ. ಜಿ, ಬಸವನಗೌಡ (ಹೊನ್ನಾಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಯಿಟ್ಟು ಉತ್ತರಿಸುವರೇ :—